ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, (ಸಿ) ಗೆ ಉತ್ತರವಾಗಿ staff strength is already related to work load ಎಂದು ಹೇಳಿದ್ದೀರಿ. ಉರ್ದು, ತಮಿಳು, ತೆಲುಗು ಈ ರಾಂಗ್ವೇಜುಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಹುಡುಗರು ಇದ್ದರೂ ಸಹ ಅದಕ್ಕೆ ಟೀಚರ್ಸ್‌ನ್ನು ನೇಮಕ ಮಾಡಿಲ್ಲ. ಆ ರೀತಿ ಅನೇಕ ಕಡೆ ನೇಮಕ ಮಾಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಮಾಹಿತಿ ನನ್ನಲ್ಲಿಲ್ಲ.

ಶ್ರೀ ಎಂ. ನಾಗಪ್ಪ.—ಯೂನಿವರ್ಸಿಟಿ ನಿಯಮಗಳ ಪ್ರಕಾರ ಪ್ರೊಫೆಸರುಗಳೇ ಆಗಲೀ ರೀಡರ್‌ಗಳೇ ಆಗಲಿ ಇಷ್ಟು ತಾಸು ಕೆಲಸ ಮಾಡಬೇಕೆಂದು ಇದೆ ಮತ್ತು ಇಷ್ಟು ವಿದ್ಯಾರ್ಥಿಗಳು ಇರಬೇಕೆಂಬ ನಿಯಮ ಇದೆ. ನೇಮಕಗಳನ್ನು ಮಾಡುವಾಗ ಇದರಂತೆ ಇದೆಯೇ ಇಲ್ಲವೇ ಎನ್ನುವುದನ್ನು ನೋಡಿ ನೇಮಕ ಮಾಡುತ್ತೀರಾ ?

2-00 P.M.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವರ್ಕ್ ಲೋಡು ಯಾವ ರೀತಿ ಇರಬೇಕು ಎನ್ನುವುದಕ್ಕೆ ಒಂದು ನಿಯಮ ಇದೆ. ಇಲ್ಲಿರುವ ನಿಯಮಗಳ ಪ್ರಕಾರ ಪ್ರೊಫೆಸರಾಗಿರುವವರು ಒಂದು ವಾರದಲ್ಲಿ ಎಂಟು ತಾಸು ಕೆಲಸ ಮಾಡಬೇಕು, ರೀಡರು ಆಗಿರುವವರು ವಾರಕ್ಕೆ 12 ತಾಸು ಮತ್ತು ಲೆಕ್ಚರರುಗಳಾದವರು ವಾರಕ್ಕೆ 18 ತಾಸು ಕೆಲಸ ಮಾಡಬೇಕೆಂದು ನಿಯಮಗಳಿವೆ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಒಂದೊಂದು ರೀತಿ ಇದೆ. ಅದರ ಆಧಾರದ ಮೇಲೆ ಆಯಾಯ ಯೂನಿವರ್ಸಿಟಿಗಳು ಕೆಲಸಮಾಡುತ್ತಿವೆ. ವರ್ಕ್ ಲೋಡು ಪ್ರಕಾರ ನೋಡಿದರೆ ಇಲ್ಲಿನ ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಧ್ಯಾಪಕರುಗಳಿಲ್ಲ ಎನ್ನುವುದು ಗೊತ್ತಾಗುತ್ತದೆ ಇವರನ್ನು ನೇಮಕ ಮಾಡಿಕೊಳ್ಳಲು ಶೀಘ್ರವಾಗಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತಾರೆ ಎಂದು ನಾನು ಭಾವಿಸಿದ್ದೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಆಯಿತು. Now held-over question No. 77 held over on 31st January 1970.

Collection of Water Rate

ಶ್ರೀ ಹೆಚ್. ಎನ್. ನಂಜೇಗೌಡ.—ಇದರಲ್ಲಿ ನೀವು ತೋರಿಸಿರುವ ಡಿಮ್ಯಾಂಡು 2·48 ಲಕ್ಷ ಆಗುತ್ತದೆ ಮತ್ತು ಡಿಮ್ಯಾಂಡುಗಳಲ್ಲಿ ಕರೆಕ್ಷನ್ ಮಾಡಿರುವುದನ್ನು ಕಳೆದರೆ 2·93 ಲಕ್ಷ ಬರುತ್ತದೆ ಮತ್ತು ಇದನ್ನು ಅರಿಯರ್ಸ್ ಎಂದು ಹೇಳುತ್ತೀರಿ. ಇದರಲ್ಲಿ ಯಾವುದು ಸರಿಯಾಗಿದೆ ಎನ್ನುವುದನ್ನು ಸರಿಯಾಗಿ ತಿಳಿಸುತ್ತೀರಾ ?

Sri H. V. KOUJALGI.—I have not calculated it again. I have given the statement and I am prepared to discuss it with my hon. friend and if any correction is necessary, I am prepared to make it.

Sri H. N. NANJE GOWDA.—It is not that, Sir. The statement regarding arrears or collection is wrong. Correct statements are not furnished to the Hon. Minister by his officers. That is what I wanted to tell him. I will put further questions. 1960–61 ರಲ್ಲಿ ಇರುವ ಅಂಕೆಗಳನ್ನು 1967–68ರ ಅಂಕೆಗಳಿಗೆ ಹೋಲಿಸಿದರೆ ಹಾಸನ ಜಿಲ್ಲೆಯಲ್ಲಿ ಶೇಕಡಾ 55 ರಷ್ಟು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇಕಡಾ 20 ರಷ್ಟು ವಾಟರು ರೇಟು ಮತ್ತು ಬೆಂಗಳೂರಿನಲ್ಲಿ ಶೇಕಡಾ 50 ರಷ್ಟು ಎಂದು ಬರುತ್ತದೆ. ಇದನ್ನೆಲ್ಲಾ ಸರಿಯಾಗಿ ಲೆಕ್ಕ ಹಾಕಿದರೆ ಒಂದು ಪಟ್ಟು, ಎರಡು ಪಟ್ಟು, ಮೂರು ಪಟ್ಟು ಇಲ್ಲವೇ ನಾಲ್ಕು ಪಟ್ಟಿನಷ್ಟು ಹೆಚ್ಚು ಬರುತ್ತದೆ. ಇದನ್ನು ಸರಿಯಾಗಿ ಮಾಡಿಲ್ಲ ಎಂದು ತೋರುತ್ತದೆ. ಇದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೀರಾ ?

Sri H. V. KOUJALGI.—I cannot give any answer unless specific notice is given. These are matters which will have to be calculated each time. If that is the calculation which my friend has made, I will have to verify.

Mr. SPEAKER.—Hon. member may meet the Hon. Minister and discuss these matters.

ಶ್ರೀ ಹೆಚ್. ಎನ್. ನಂಜೇಗೌಡ,—ಇದರಲ್ಲಿ 2·94 ಲಕ್ಷ ಬಾಕಿ ಇದೆ ಎಂದು ಹೇಳುತ್ತೀರಿ. ಇದರಲ್ಲಿ ಬಳ್ಳಾರಿ ಬೆಳಗಾಂ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ನುಮಾರು ನಾಲ್ಕು ಲಕ್ಷ ಬಾಕಿ ಇದೆ ಉಳಿದ 15 ಜಿಲ್ಲೆಗಳಲ್ಲಿ 194 ಲಕ್ಷ ಬಾಕಿ ಇದೆ ಎಂದು ಇಲ್ಲಿ ನಾಲ್ಕೇ ಜಿಲ್ಲೆಗಳಲ್ಲಿ ಸ್ಪೆಷಲ್ ಆಗಿ ಹೇಳಲು ಕಾರಣವೇನು? ಚಿತ್ರದುರ್ಗದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾರೆ ಎಂದು, ಬೆಳಗಾಂನಲ್ಲಿ ತಾವು ಇದ್ದೀರೆಂದು, ಬಳ್ಳಾರಿಯಲ್ಲಿ ನಿಮಗೆ ಬೇಕಾದವರು ಅಲ್ಲಂ ಕರಿಬಸಪ್ಪನವರು ಇದ್ದಾರೆಂದು ಹೀಗೆ ಮಾಡಲಾಗಿದೆಯೆ? ಇದಕ್ಕೆ ನಿರ್ದಿಷ್ಟವಾದ ಕಾರಣಗಳೇನು?

Sri H. V. KOUJALGI.—The suggestion made by my hon. friend is not acceptable, Sir. But in some districts, arrears are more. In some districts, arrears are less, because it is due to the seasonal conditions and out-turn of crops there.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ ವಾಟರು ರೇಟು ಬಾಕಿ ಇದೆ ಎಂದು ಹೇಳಿರುವುದರಲ್ಲಿ ಸ್ವಲ್ಪ ಹೆಚ್ಚಾಗಿದೆ ಎಂದು ಇದರ ಬಗ್ಗೆ ಡೆಪ್ಯೂಟಿ ಕಮಿಷನರು ಪರಿಶೀಲಿಸಿ ಸರಕಾರಕ್ಕೆ ತಿಳಿಸಿದ್ದಾರೆ. ಇದರ ಬಗ್ಗೆ ಸರಕಾರ ಇನ್ನೂ ಪರಿಶೀಲನೆ ಮಾಡಿ ನಿರ್ಣಯವನ್ನು ಕಳುಹಿಸಿಲ್ಲವೆ?

Sri H. V. KOUJALGI.—In each case, notices have been issued and their objections will be heard under the Act by the Assistant Commissioner. If anything is wrong, it will be rectified.

ಶ್ರೀ ಕೆ. ಹೆಚ್. ರಂಗನಾಥ್.—66–67 ರಿಂದ 67–68ರ ವರೆಗೆ ವಾಣಿವಿಲಾಸ ಸಾಗರದಿಂದ ನೀರನ್ನು ಕೊಡಲಿಲ್ಲ. ನೀರನ್ನು ಕೊಡದೇ ವಾಟರು ರೇಟು ಎಂದು ಇಲ್ಲಿ ಹಾಕಲು ಕಾರಣವೇನು?

Sri H. V. KOUJALGI.—I have already stated that the demand will be issued as per the statements supplied by the local officers. If water is not supplied, after enquiry it will be corrected.

ಶ್ರೀ ಬಿ. ಪಿ. ಗಂಗಾಧರ್.—ನಮ್ಮ ತುಮಕೂರು ಜಿಲ್ಲೆಯ ಭಾಗದಲ್ಲಿ ದೊಡ್ಡ ಹೊಂಡಗಳನ್ನು ತೆಗೆದು ಆದರ ಮೂಲಕ ಕೆಲವರು ಸಾಗು ಮಾಡುತ್ತಿದ್ದಾರೆ. ಇವೆರೆಲ್ಲ ಬಡವರು ಹತ್ತು ಗುಂಟೆ ಒಂದು ಎಕರೆ ಎಂದು ಕಡಿಮೆ ಇಟ್ಟುಕೊಂಡು ಇರುವವರು. ಇವರ ಮೇಲೆ ವಾಟರು ರೇಟು ಕೊಡಬೇಕೆಂದು ಹಾಕಿದರೆ ನರಿಯಾಗುವುದಿಲ್ಲ. ಇದರ ಬಗ್ಗೆ ಇಲ್ಲಿನ ಡಿ.ಸಿ. ಕಡೆಗೂ ಮನವಿಗಳನ್ನು ಕೊಡಲಾಗಿದೆ. ಇದನ್ನು ಪರಿಶೀಲನೆ ಮಾಡುತ್ತೀರಾ?

Sri H. V. KOUJALGI.—The demands have been made as per rules under this Act and if the demand is wrong it will be definitely considered.

ಶ್ರೀ ಎನ್. ಎ. ಚನ್ನೇಗೌಡ.—ಕೃಷ್ಣರಾಜಸಾಗರದಲ್ಲಿ 1965 ರಿಂದ 1969ನೇ ಸಾಲಿನವರೆಗೆ ನೀರಿಲ್ಲ ಎಂದು ಇಲ್ಲಿನ ಅಚ್ಚುಕಟ್ಟುದಾರರುಗಳಿಗೆ ನೀರನ್ನೇ ಕೊಡಲಿಲ್ಲ. ಇಲ್ಲಿ ಯಾವ ಬೆಳೆಯನ್ನೂ ಮಾಡಲಾಗಲಿಲ್ಲ. ಇವರಿಗೆ ಕಂದಾಯ ಮಾಫಿ ಕೂಡ ಮಾಡಲಾಗಿತ್ತು. ಇದರಂತೆ ಇಲ್ಲಿನ ಅಚ್ಚುಕಟ್ಟುದಾರರುಗಳಿಗೂ ವಾಟರು ರೇಟನ್ನು ಮಾಫಿ ಮಾಡಲಾಗುತ್ತದೆಯೇ?

Sri H. V. KOUJALGI.—I have already said that there is a provision in the Act and the aggrieved party can go in appeal.

ಶ್ರೀ ಬಿ. ಗಂಗಣ್ಣ.—ತುಮಕೂರು ಜಿಲ್ಲೆಯಲ್ಲಿ ನೀರೇ ಇಲ್ಲ. ಇಲ್ಲಿ ರೈತರಿಗೆ ನೀರನ್ನೇ ಕೊಡದೆ ವಾಟರು ರೇಟ್ಸು ಕೊಡಬೇಕೆಂದು ಹೇಳುತ್ತಾರೆ. ಇದನ್ನು ಡೆಪ್ಯೂಟಿ ಕಮಿಷನರವರ ಗಮನಕ್ಕೂ ತರಲಾಗಿದೆ. ಇಲ್ಲಿ ವಾಟರು ರೇಟನ್ನು ವಸೂಲು ಮಾಡಕೂಡದು ಎಂದು ಇಲ್ಲಿರುವ ಲೋಕಲ್ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡಲಾಗಿದೆಯೇ ?

Sri H. V. KOUJALGI.—Sir, the same question is put in another form. The persons who are aggrieved can go in appeal. Some have already gone in appeal and their cases are under consideration.

ಶ್ರೀ ಎನ್. ಚಿಕ್ಕೇಗೌಡ.—1965-66ರಲ್ಲಿ ಹೊಸಕೋಟೆ ತಾಲ್ಲೂಕ್‌ನಲ್ಲಿ ಅಭಾವ ಪರಿಸ್ಥಿತಿ ಇದೆ ಎಂಬ ಕಾರಣದಿಂದ ಕ್ಷಾಮ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಲಾಗಿತ್ತು. ಈ ರೀತಿ ಇದ್ದರೂ ಕೂಡ ಶಾನುಭೋಗರು ಜಮಾಬಂದಿ ಲೆಕ್ಕದಲ್ಲಿ ಕಂದಾಯದ ಜೊತೆಗೆ ನೀರಿನ ತೆರಿಗೆಯನ್ನು ಸಹ ಸೇರಿಸಿ ವಸೂಲ ಮಾಡಿದ್ದಾರೆ. ಇದು ಸರಿಯಲ್ಲ. ಈ ರೀತಿ ವಸೂಲ ಮಾಡಿರುವ ಹಣವನ್ನು ವಾಪಸ್ ಮಾಡುವ ಬಗ್ಗೆ ಭರವಸೆ ಕೊಡುತ್ತೀರಾ ?

Sri H. V. KOUJALGI.—The question arises in the case of persons who have taken water from Government sources. If they have taken water, they will have to pay the levy even though scarcity may be there.

ಶ್ರೀ ನದಾಶಿವಪ್ಪ ಪಾಟೀಲ್.—ರಾಯಚೂರು ಜಿಲ್ಲೆಯಿಂದ ಅಲ್ಲಿಯ ಜಿಲ್ಲಾಧಿಕಾರಿಯವರು ಕೆಲವು ಭಾಗಗಳಲ್ಲಿ ವಾಟರ್ ರೇಟನ್ನು ರೈಟ್ ಆಫ್ ಮಾಡಬೇಕೆಂದು ಸರ್ಕಾರಕ್ಕೆ ಕಾಗದ ಬರೆದಿದ್ದಾರೆಯೇ ಎಂದು ಶ್ರೀ ನಾಗಪ್ಪನವರು ಕೇಳಿದ ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ. ಸ್ಥಳೀಯ ಅಧಿಕಾರಿಗಳು ಯಾವ ಯಾವ ಕಾರಣಗಳನ್ನು ಕೊಟ್ಟರೆ ಸರ್ಕಾರದವರು ವಾಟರ್‌ರೇಟನ್ನು ರೈಟ್ ಆಫ್ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. ಫೀಡರ್ ಚಾನಲ್‌ನಿಂದ ನೀರನ್ನು ಬಿಡದ ಕಡೆಗಳಲ್ಲಿಯೂ ಕೂಡ ವಾಟರ್ ರೇಟನ್ನು ಹಾಕಿದ್ದಾರೆ. ಇದು ಸರಿಯಲ್ಲ. ಇಂತಹ ಭಾಗಗಳಲ್ಲಿ ವಾಟರ್ ರೇಟ್ ಹಾಕಬಾರದು ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದರೆ ಅದನ್ನು ರೈಟ್-ಆಫ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

Sri H. V. KOUJALGI.—If the local officer, *i.e.* the Depnty Commissioner has recommended, certainly it will be taken into consideration and his report will be accepted.

ಶ್ರೀ ಎಚ್. ಬಿ. ಜ್ವಾಲನಯ್ಯ.—ವಾಟರ್ ರೇಟ್ ಬಗ್ಗೆ ಇಡೀ ರಾಜ್ಯದಲ್ಲಿ ರೈತರು ಆಕ್ಷೇಪಣೆ ಮಾಡುತ್ತಿದ್ದಾರೆ. ಲೆಕ್ಕದ ಪ್ರಕಾರ ರಾಜ್ಯಕ್ಕೆ ಬಾಕಿ ಬರಬೇಕಾಗಿರುವುದು ಬಹಳ ಹಣ ಇದೆ. ಶಾಸ್ತ್ರೀಯವಾದ ರೀತಿಯಲ್ಲಿ ವಾಟರ್ ರೇಟನ್ನು ಹಾಕುತ್ತಿಲ್ಲ. ಈ ಕಾರಣದಿಂದ ವಾಟರ್ ರೇಟ್ ಆಕ್ಟ್‌ನ್ನೇ ತೆಗೆದು ಹಾಕಿ ಕೇವಲ ತರೀ ಕಂದಾಯ ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri H. V. KOUJALGI.—This suggestion is not acceptable because huge projects are constructed by spending lakhs and crores of rupees.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೆಲವು ಕಡೆ ಬೆಳೆಗೆ ಬೇಕಾದಷ್ಟು ನೀರು ಸಿಗದೆ ಬೆಳೆಹಾಳಾಗಿದೆ. ಅಂತಹ ಕಡೆಯೂ ಕೂಡ ವಾಟಾರ್ ರೇಟನ್ನು ವಸೂಲು ಮಾಡಲಾಗಿದೆ. ಇಂಥ ಕೇಸ್‌ಗಳಲ್ಲಿ ವಾಟರ್ ರೇಟನ್ನು ಮಜಾ ಮಾಡುತ್ತೀರಾ ?

Sri H. V. KOUJALGI.—I have already said such cases will be reconsidered.

ಶ್ರೀ ಬೋಳಾ ರಘುರಾಮಶೆಟ್ಟಿ.—ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಳೆ ನೀರನ್ನು ಉಪಯೋಗಿಸಿಕೊಂಡು ರೈತರು ಸಾಗುವಳಿ ಮಾಡುತ್ತಿದ್ದಾರೆ. ಈ ರೀತಿ ಬಹಳ ಹಿಂದಿನಿಂದಲೂ ಕೂಡ ಮಾಡಿಕೊಂಡುಬಂದಿದ್ದಾರೆ. ಅಂಥವರ ಮೇಲೂ ಕೂಡ ವಾಟರ್ ರೇಟ್ ಹಾಕುವುದು ನ್ಯಾಯವೇ ? ಅಂಥ ಕೇಸ್‌ನಲ್ಲಿ ಪಾಪಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri H. V. KOUJALGI.—I think my friend refers to spring water. There, water levy has been reduced from Rs. 12 to Rs. 4 per acre per year.

ಶ್ರೀ ಚುರ್ಚಿಹಾಳ್‌ಮಠ್.—ವಾಟರ್ ರೇಟ್ ಹಾಕುವುದರ ಜೊತೆಗೆ ಪ್ರತಿ ಮೂರು ತಿಂಗಳಿಗೆ ಒಂದು ಸಲ ಮೇನ್‌ಟೆನೆನ್ಸ್ ಸೆಸ್ ಕೂಡ ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri H. V. KOUJALGI.—Maintenance charge is there as per the Act.

ಶ್ರೀ ಎಚ್. ಎನ್. ನಂಜೇಗೌಡ.—1960-61ರಲ್ಲಿ ವಾಟರ್ ರೇಟ್ ಮೂಲಕ 3 ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಬಾಕಿ ಬರಬೇಕಾಗಿದ್ದರೆ ಇಂದು 150 ಲಕ್ಷ ರೂಪಾಯಿಗಳವರೆಗೆ ಬಾಕಿ ಬರಬೇಕಾಗಿದೆ. ಇದಕ್ಕೆ ಕಾರಣ ಹೊಸದಾಗಿ ಎಲ್ಲೆಲ್ಲಿ ಕೆರೆಗಳನ್ನು ಕಟ್ಟಿಸಲಾಗಿದೆಯೋ ಅಲ್ಲೆಲ್ಲಾ ವಾಟರ್ ರೇಟನ್ನು ಹಾಕಿಕೊಂಡು ಬಂದಿರುವುದು. ಕೆಲವು ಕೆರೆಗಳಲ್ಲಿ ನೀರು ಇಲ್ಲದಿದ್ದರೂ ಕೂಡ ಆ ಭಾಗದಲ್ಲಿ ವಾಟರ್ ರೇಟನ್ನು ಹಾಕಲಾಗಿದೆ. ಶಾಸ್ತ್ರೀಯವಾದ ರೀತಿಯಲ್ಲಿ ವಾಟರ್ ರೇಟನ್ನು ಹಾಕುತ್ತಿಲ್ಲ. ಈ ಕಾರಣದಿಂದ ನಾನು ಮೊದಲೇ ಹೇಳಿದಂತೆ ನೀರಿನ ಅನುಕೂಲ ಇಲ್ಲದಿರುವ ಕಡೆ ವಾಟರ್ ರೇಟನ್ನು ವಜಾ ಮಾಡುತ್ತೀರಾ ? Invariably, are you going to exempt these areas from water rate in that year ?

Sri H. V. KOUJALGI.—The rules were framed after 3 years. They have been made applicable with retrospective effect. Some difficulty has arisen. If there is any mistake or any inconvenience, it will definitely be re-examined.

ಶ್ರೀ ಎಚ್. ಎನ್. ನಂಜೇಗೌಡ.—ಮಳೆಯಾಗದಿರುವಂತಹ ವರ್ಷಗಳಲ್ಲಿ ಭೂಕಂದಾಯವನ್ನು ಮನ್ನಾ ಮಾಡಿದ್ದೀರಿ. ಕಂದಾಯ ವಜಾ ಮಾಡುವುದರ ಅರ್ಥ ಮಳೆಯಾಗಿಲ್ಲ ಎಂಬ ಕಾರಣದಿಂದ. ಪ್ರತಿಯೊಂದು ಕೇಸ್‌ನಲ್ಲಿಯೂ ಕೂಡ ರೈತರೇ ಮುಂದೆ ಬಂದು ಸರ್ಕಾರದವರನ್ನು ವಾಟರ್ ರೇಟನ್ನು ವಜಾ ಮಾಡಿ ಎಂದು ಕೇಳುವುದಕ್ಕೆ ಆಗುವುದಿಲ್ಲ. ಹಿಂದೆ ಮಳೆಯಾಗಿಲ್ಲವೆಂಬ ಕಾರಣದಿಂದ ಮೂರು ವರ್ಷಗಳ ಕಾಲ ಕ್ಷಾಮ ಪರಿಹಾರ ಕಾಮಗಾರಿ ಕೆಲಸಗಳನ್ನು ಮಾಡಿಸಿದಿರಿ. ಈ ವರ್ಷಗಳಲ್ಲಿ ವಾಟರ್ ರೇಟನ್ನು ಮನ್ನಾ ಮಾಡುತ್ತೀರಾ ?

Sri H. V. KOUJALGI.—I have already said if water is not taken, exemption will have to be given.

ಶ್ರೀ ಎಸ್. ಶಿವಪ್ಪ.—ಈಗ ಶಾನುಭೋಗರು ಪಹಣಿ ಲೆಕ್ಕವನ್ನು ಸರಿಯಾಗಿ ಬರೆದಿಲ್ಲ. ಮಳೆಯಾಗದಿದ್ದರೂ ಕೂಡ ವಾಟರ್ ರೇಟನ್ನು ವಸೂಲಿ ಮಾಡುವುದು ಯಾವ ನ್ಯಾಯ ? 1965-66ರಿಂದ ಮೂರು ವರ್ಷಗಳವರೆಗೆ ವಾಟರ್ ರೇಟನ್ನು ಸಾಮೂಹಿಕವಾಗಿ ವಸೂಲಿ ಮಾಡುವುದು ಸರಿಯೇ ಎಂದು ಕೇಳುತ್ತೇನೆ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತದೆ. ಈ ಕಾರಣದಿಂದ ವಾಟರ್ ರೇಟನ್ನು ಸಾಮೂಹಿಕವಾಗಿ ವಜಾ ಮಾಡುವುದನ್ನು ಪರಿಶೀಲನೆ ಮಾಡುತ್ತೀರಾ ?

Sri H. V. KOUJALGI.—I do appreciate that some difficulty has arisen. The matter will have to be re-examined. But there are cases where people have definitely taken water. In such cases we cannot give any concessions, but where they have not taken water and where they have been supplied with limited water, there is provision for that and we have asked our officers to re-examine such cases very liberally.

Sri H. SIDDAVEERAPPA.—Instead of waiting for objections being filed by individual atchkatdars, will the Hon. Minister please consider the necessity of asking the officers to go to every village, get all the atchkatdars together and make local enquiries and then think of finalising these demands instead of simply sending them from the Taluk Office to avoid all undue hardship ? Sometimes our villagers do not know when to appeal in time. To avoid all that hardship will you kindly consider the matter from this angle and take a decision in the matter ?

Sri H. V. KOUJALGI.—Where there are many complaints, I have already followed this system.